ಪತಿ: ಏನೇ ನಮ್ಮ ಮಗ ನಾನು ಹೇಳಿದ್ದಕ್ಕೆಲ್ಲ ವಿರುದ್ಧವಾಗಿಯೇ ಮಾತನಾಡುತ್ತಾನಲ್ಲ?
ಪತ್ನಿ: ಇನ್ನೇನ್ರಿ, ನಾನು ಮಗನಿಗೆ ಪ್ರಹ್ಲಾದ ಅಂತ ಹೆಸರಿಡೋದು ಬೇಡ ಎಂದಿದ್ದಕ್ಕೆ ನೀವು ಕೇಳಿದ್ರಾ!

***

ಆತ: ನಿನ್ನ ಮದುವೆ ನಿಂತು ಹೋಗುವುದಕ್ಕೆ ಕಾರಣ?
ಈತ: ಒಂದೇ ಒಂದು ಸತ್ಯ ಹೇಳಿದ್ದಕ್ಕೆ.
ಆತ: ಮದುವೆ ನಿಂತು ಹೋಗುವಂಥ ಆ ಸತ್ಯ ಯಾವುದು?
ಈತ: ನನಗೆ ಮದುವೆಯಾಗಿದೆ ಅಂತ ಹೇಳಿದೆ!

***

ನಂದೀಶ: ಅರ್ಜುನ, ಈ ಪರೀಕ್ಷೆಗಳೆಂದರೆ ಗರ್ಲ್ ಫ್ರೆಂಡ್ ಇದ್ದ ಹಾಗೆ ಕಣೋ!
ಅರ್ಜುನ: ಅದ್ಹೇಗೆ?
ನಂದೀಶ: ಇನ್ನೇನು ಮತ್ತೆ, ಪ್ರಶ್ನೆಗಳು ಒಂದೂ ಅರ್ಥವಾಗುವುದಿಲ್ಲ, ಏನೇ ವಿವರಿಸಿದರೂ, ಉತ್ತರಿಸಿದರೂ ರಿಸಲ್ಟ್ ಮಾತ್ರ ಫೇಲ್!

***

ಪತಿ: ಅಲ್ಲ ಕಣೆ, ಪಕ್ಕದ ಮನೆಯವನು ನನ್ನನ್ನು ಅಯೋಗ್ಯ, ಜವಾಬ್ದಾರಿ ಇಲ್ಲದ ಮನುಷ್ಯ, ದ್ರೋಹಿ... ಅಂತೆಲ್ಲ ಬಯ್ಯುತ್ತಿದ್ದರೂ ನೀನು ಸುಮ್ಮನಿದ್ದೆಯಲ್ಲ ಏಕೆ?
ಪತ್ನಿ: ನಿಮ್ಮ ಬಗ್ಗೆ ಇಷ್ಟೆಲ್ಲ ವಿಷಯಗಳು ಹೇಗೆ ಗೊತ್ತಾಯ್ತು ಅಂತ ಯೋಚಿಸುತ್ತಾ ಇದ್ದೆ!

***

ಗಿರಿ: ಏನೋ ಗುರು, ಇವತ್ತು ಇಷ್ಟೊಂದು ಖುಷಿಯಾಗಿದ್ದೀಯಲ್ಲ?
ಗುರು: ಇವತ್ತು ನನಗೆ ಸ್ವಾತಂತ್ರ್ಯ ಸಿಕ್ತು.
ಗಿರಿ: ಯಾವ ಸ್ವಾತಂತ್ರ್ಯನೋ?
ಗುರು: ನನ್ನ ಸತತ ಆರು ವರ್ಷಗಳ ಹೋರಾಟಕ್ಕೆ ಇವತ್ತು ವಿಚ್ಛೇದನ ದೊರೆಯಿತು!

***

ಆತ: ಸಾರ್, ನನಗೆ ಇತ್ತೀಚೆಗೆ ಎಲ್ಲ ಮರೆತು ಹೋಗ್ತಾ ಇದೆ, ಇದಕ್ಕೆ ಏನಾದರೂ ನಿಮ್ಮಲ್ಲಿ ಪರಿಹಾರ ಇದೆಯೆ?
ಡಾಕ್ಟರ್: ಇದೆ. ಮೊದಲು ಒಂದು ಸಾವಿರ ರೂಪಾಯಿ ಕೊಡಿ, ಆಮೇಲೆ, ಪರಿಹಾರ ಏನು ಅಂತ ಹೇಳ್ತೀನಿ!


***

ತಂದೆ: ನಿನಗೆ, ನಾನು ಐವತ್ತು ಸಾವಿರ ರೂಪಾಯಿ ಕೊಟ್ಟರೆ ಏನು ಮಾಡ್ತೀಯಾ?
ಮಗ: ಅಪ್ಪ, ಹಣದ ವಿಷಯದಲ್ಲಿ ನಾನು ಯಾರನ್ನೂ ನಂಬುವುದಿಲ್ಲ. ನೀವು ಕೊಟ್ಟ ಹಣವನ್ನು ಮೊದಲು ಎಣಿಸುತ್ತೇನೆ!

***

ಹೇಮಂತ: ವಿಶ್ವ, ನನಗೆ ಒಂದು ವಿಷಯ ಮಾತ್ರ ಇನ್ನೂ ಅರ್ಥ ಆಗಲಿಲ್ಲ.
ವಿಶ್ವ: ಯಾವ ವಿಷಯ?
ಹೇಮಂತ: ಬಾಲ್ಯ, ಯೌವನ, ಮುಪ್ಪು, ಇವೆಲ್ಲವೂ ಜೀವನದಲ್ಲಿ ಒಂದೇ ಸಲ ಅನುಭವವಾಗುತ್ತದೆ. ಆದರೆ ಪರೀಕ್ಷೆಗಳು ಮಾತ್ರ ವರ್ಷ ವರ್ಷವೂ ಇದೆಯಲ್ಲ. ಯಾಕೆ?

ಆತ: ಸರ್, ನೀವು ಇಂಗ್ಲಿಷ್ ಪಾಠ ಮಾಡುವಾಗ ಒಂದು ಪದ ಕೂಡ ಕನ್ನಡ ಬಳಸುವುದಿಲ್ಲ. ಆದರೆ ಬಯ್ಯುವಾಗ ಮಾತ್ರ ಕನ್ನಡದಲ್ಲಿ ಬಯ್ಯುತ್ತೀರಲ್ಲ. ಯಾಕೆ?
ಉಪನ್ಯಾಸಕ: ಹೌದು, ನಾನೇದರೂ ಇಂಗ್ಲಿಷ್‌ನಲ್ಲಿ ಬಯ್ಯುವುದಕ್ಕೆ ಹೊದ್ರೆ, ಅದನ್ನು ಅವರು ಪಾಠ ಅಂತ ತಿಳ್ಕೊಂಡು ಬಿಡ್ತಾರೆ.




ಪತ್ನಿ: ಏನ್ರಿ, ಶಿಕ್ಷಕರ ದಿನಾಚರಣೆಗೂ ಹೂ ಕೊಡ್ತಾ ಇದ್ದೀರಲ್ಲ?
ಪತಿ: ಹೌದು ಕಣೆ, ನಾನು ನಿನಗೆ ಹೂ ಕೊಡಬೇಕಾದದ್ದು ನನ್ನ ಧರ್ಮ. ಏಕೆಂದರೆ ನಿನ್ನಿಂದ ಕೇಳಿದಷ್ಟು ಪಾಠವನ್ನು ಇದುವರೆಗೂ ನಾನು ಯಾರಿಂದಲೂ ಕೇಳಿಲ್ಲ.

ಜಗದೀಶ: ಮಹೇಶ, ನೀನು ಆ ಮಂತ್ರವಾದಿ ಹತ್ತಿರ ಕಲಿತ ಮಂತ್ರವಿದ್ಯೆಯನ್ನು ನನ್ನ ಮೇಲೆ ಪ್ರಯೋಗ ಮಾಡಿ ನೋಡೋಣ.
ಮಹೇಶ: ಮೊದಲು ಕಣ್ ಮುಚ್ಚು, ಹಾಂ... ಓಂ... ಹ್ರೀಂ... ಈಗ ಕಣ್ಣು ತೆರಿ.
ಜಗದೀಶ: ಏನೂ ಆಗಲೇ ಇಲ್ಲ!
ಮಹೇಶ: ಈ ಮಂತ್ರವಿದ್ಯೆಯು ಮಾನವ ರೂಪದಲ್ಲಿರುವ ಮಂಗಗಳ ಮೇಲೆ ಪ್ರಭಾವ ಬೀರೋದಿಲ್ಲ ಅಂತ ಹೇಳಿದ್ರು.

***

ಪತ್ನಿ: ರೀ, ಒಂದು ವೇಳೆ ನಾನು ಸತ್ತರೆ ಕಣ್ಣೀರು ಹಾಕ್ತೀರಾ?
ಪತಿ: ಖಂಡಿತ ಕಣ್ಣೀರು ಹಾಕ್ತೀನಿ.
ಪತ್ನಿ: ಹಾಗಾದ್ರೆ, ಈಗ ಕಣ್ಣೀರು ಹಾಕಿ ನೋಡೋಣ.
ಪತಿ: ಆಯ್ತು. ನೀನೀಗಲೇ ಸಾಯಿ ಕಣ್ಣೀರು ಹಾಕ್ತೀನಿ.

***

ವಕೀಲ: ನೋಡಯ್ಯಾ, ನೀನು ದೇವರ ಮೇಲೆ ಆಣೆ ಮಾಡಿದ್ದೀಯ. ಸುಳ್ಳು ಹೇಳಿದರೆ ನರಕಕ್ಕೆ ಹೋಗ್ತೀಯ.
ಅಪರಾಧಿ: ನೋಡಿ ಸ್ವಾಮಿ, ನಾನು ನರಕಕ್ಕೆ ಹೋಗೋದಕ್ಕೂ ಸಿದ್ಧ. ಆದರೆ ಈಗ ಸತ್ಯ ಹೇಳಿ ಜೈಲಿಗೆ ಹೋಗಲಾರೆ.

***

ಪತಿ: ನನಗೆ ಮರೆಗುಳಿ ಕಾಯಿಲೆ ಇದೆ ಅಂತ ಬೈತಿದ್ದೆ ಅಲ್ವಾ... ಇವತ್ತು ನೋಡು ಬೆಳಿಗ್ಗೆ ನಾನು ತೆಗೆದುಕೊಂಡು ಹೋಗಿದ್ದ ಸೈಕಲ್ ಮರೆಯದೇ ವಾಪಸ್ ತಂದಿದ್ದೇನೆ.
ಪತ್ನಿ: ಅಯ್ಯೋ... ನೀವು ಬೆಳಿಗ್ಗೆ ಏನೂ ತೆಗೆದುಕೊಂಡು ಹೋಗಿರಲಿಲ್ಲ.

***

ಡಾಕ್ಟರ್: ಆಪರೇಷನ್ ಮಾಡ್ತೀನಿ. ಆದರೆ ಅದು ಸಕ್ಸಸ್ ಆಗುತ್ತೋ ಇಲ್ವೊ ಅಂತ ಹೇಳೋಕೆ ಆಗುವುದಿಲ್ಲ. ಆಪರೇಷನ್‌ಗೆ ಒಂದು ಲಕ್ಷದವರೆಗೂ ಮಾತ್ರ ದುಡ್ಡು ಖರ್ಚಾಗುತ್ತದೆ.
ಆತ: ಇದರಲ್ಲಿ ನನ್ನ ಅಂತಿಮ ಸಂಸ್ಕಾರದ ಖರ್ಚು ಸೇರಿದ್ಯಾ?

***

ಪತ್ನಿ: ಮದುವೆಗೆ ಮೊದಲು, ನನ್ನ ಸೌಂದರ್ಯ ಹೊಗಳುತ್ತಿದ್ರಿ. ಈಗ ಏನೂ ಹೇಳೋದೆ ಇಲ್ಲವಲ್ಲ. ಯಾಕೆ?
ಪತಿ: ಮದುವೆಯಾದ ಮೇಲೆ ಸುಳ್ಳು ಹೇಳಬಾರದು ಅಂತ ತೀರ್ಮಾನಿಸಿದ್ದೀನಿ ಕಣೆ.

***

ಸಂಗೀತಗಾರ: ನನ್ನ ಸಂಗೀತ ಕೇಳಿದ್ರಿ ಅಲ್ವಾ... ನಿಮ್ಮ ಅಭಿಪ್ರಾಯ?
ಆತ: ಎದುರು ಕುಳಿತು ಕೇಳುವುದಕ್ಕಿಂತ ಟೀವಿ, ಮೊಬೈಲ್‌ನಲ್ಲಿ ಕೇಳುವುದು ಸರಿ ಅನಿಸಿತು.
ಸಂಗೀತಗಾರ: ಹಾಗಾದ್ರೆ ನನ್ನ ಸಂಗೀತ ಅಂದ್ರೆ ಅಷ್ಟೊಂದು ಇಷ್ಟನಾ ನಿಮ್ಗೆ?

***

ನಿರ್ದೇಶಕ: ಸರ್, ಚಿತ್ರೀಕರಣಕ್ಕೆ ಜೈಲು ಬಿಟ್ಟುಕೊಟ್ಟು ಸಹಕರಿಸಿದಿರಿ ಧನ್ಯವಾದಗಳು. ಮತ್ತೆ ಅವಶ್ಯಕತೆಯಾದಾಗ ಬಂದೇ ಬರುತ್ತೇವೆ.
ಜೈಲು ಅಧಿಕಾರಿ: ಖಂಡಿತ ಬನ್ನಿ, ನಿಮಗಾಗಿ ಜೈಲಿನ ಬಾಗಿಲು ಸದಾ ತೆರೆದಿರುತ್ತದೆ.

***

ಕಿಟ್ಟು: ವೆಂಕಿ, ಡಾಕ್ಟರು ನಿನಗೆ ಹಲ್ಲು ಕಿತ್ತಾಗ ನೋವಾಯ್ತಾ?
ವೆಂಕಟೇಶ: ಹಲ್ಲು ಕಿತ್ತಾಗೇನೂ ನೋವಾಗಲಿಲ್ಲ, ಹಲ್ಲು ಕಿತ್ತಿದ್ದಕ್ಕೆ ಒಂದು ಸಾವಿರ ಕೇಳಿದ್ರಲ್ಲ ಆಗ ನೋವಾಯ್ತು!

ಸಂಗ್ರಹ: ಶಂಕರೇಗೌಡ ತುಂಬಕೆರೆ,
ಮಂಡ್ಯ